ಶ್ರೋತೃಗಳೇ ಅವರ ದೇವರಾಗುತ್ತಿದ್ದರು. ಅದರಿಂದಾಗಿಯೇ ಅವರ ಕಾರ್ಯಕ್ರಮ ಎಲ್ಲೇ ನಡೆಯಲಿ ಅವರು ಜನರಿಗೆ ತಲೆಬಾಗಿ ವಂದಿಸುತ್ತಿದ್ದರು.

"ನಾವು ಚಿಕ್ಕಂದಿನಿಂದಲೇ ಸ್ವರವನ್ನು ಭಗವಂತ ಎಂದು ಭಾವಿಸಿಕೊಂಡು ಬಂದವರು. ಸ್ವರ ಸದಾ ನನ್ನ ಮನದಲ್ಲಿ ಇರುತ್ತಿತ್ತು. ನಾನು ಈ ಸ್ವರವನ್ನು ಹೇಗೆ ನೋಡುವುದು. ನಾನು ಇಲ್ಲಿ ಸಂಗೀತದ ಬಗ್ಗೆ ಮಾತನಾಡುತ್ತಿಲ್ಲ. ಅದು ಬೇರೆ. ಸ್ವರದ ಭಾಷೆಯ ಬಗ್ಗೆ ಮಾತನಾಡುತ್ತಿದ್ದೇನೆ. ನಿಮಗೆ ಸ್ವರದ ಮೂಲಕವೇ ನೇರವಾಗಿ ಸಂವಹಿಸಲು ಸಾಧ್ಯವಾಗಬೇಕು. ಪ್ರಪಂಚದಲ್ಲಿ ಸ್ವರ ಒಂದು ಬಿಟ್ಟು ಬೇರೆಯಾವುದೇ ಭಾಷೆಯೂ ಇಲ್ಲದೇ ಹೋಗಿದ್ದರೆ ಎಂದು ನಾನು ಎಷ್ಟೋ ಬಾರಿ ಯೋಚಿಸುತ್ತೇನೆ. ರಾಗ ಅನ್ನುವುದು ಸ್ಕೇಲ್ ಅಲ್ಲ. ಅದು ಸೂಕ್ಷ್ಮವಾದ ಅನುಸ್ವರಗಳಿಂದ ರೂಪುಗೊಂಡಿದೆ. ನಿಮಗೆ ವಾದಿ, ಸಂವಾದಿ, ಇತ್ಯಾದಿ ಮೂಲವಿಷಯಗಳು ಗೊತ್ತಿರಬೇಕು. ಆದರೆ ರಾಗ ಚಲಿಸುತ್ತಿರುವಾಗ, ಅದಕ್ಕೊಂದು ಜೀವಂತ ಅಸ್ತಿತ್ವ ಬಂದು ಬಿಡುತ್ತದೆ. ನಾನು ರಾಗಕ್ಕೆ ಶರಣಾಗಿಬಿಡುತ್ತೇನೆ. ನಾನು ರಾಗದಲ್ಲಿನ ಸ್ವರಗಳ ವಿಭಿನ್ನ ಛಾಯೆಗಳನ್ನು, ಸ್ವರಗಳ ಸ್ಥಾನವನ್ನು ತೋರಿಸುವಂತೆ ನಾನದನ್ನು ಬೇಡಿಕೊಳ್ಳುತ್ತೇನೆ. ಇದಕ್ಕೆ ಸೂಚಿತ ವ್ಯಾಕರಣವನ್ನು ಮೀರಿ ಆಚೆಗೆ ಹೋಗಬೇಕಾಗುತ್ತದೆ." ಅಮೋಲ್ ಪಾಲೇಕರ್ ನಿರ್ದೇಶಿಸಿರುವ 'ಭಿನ್ನ ಷಡ್ಜ' ಸಾಕ್ಷ್ಯಚಿತ್ರದಲ್ಲಿ ಒಂದು ಕಡೆ ಭಾಗ್ಯಶ್ರೀ ರಾಗದಲ್ಲಿ ಪಂಚಮವನ್ನು ವಿಸ್ತರಿಸುವ ಬಗ್ಗೆ ಮಾತನಾಡುವಾಗ ರಾಗವೇ ತನ್ನನ್ನು ಹಾಗೆ ವಿಸ್ತರಿಸು ಎಂದು ಅವರನ್ನು ಮೊರೆಯಿಡುತ್ತಿರುವಂತೆ ಭಾಸವಾಗುತ್ತಿತ್ತಂತೆ.

"ಸ್ವರ ಅನ್ನುವುದು ತೀರಾ ದೈವಿಕವಾದದ್ದು. ಆ ಸ್ಥಿತಿಯನ್ನು ತಲುಪಬೇಕಾದರೆ ನಿಮಗೆ ನಿಮ್ಮನ್ನು ಸಂಪೂರ್ಣವಾಗಿ ಮರೆಯುವುದಕ್ಕೆ ಸಾಧ್ಯವಾಗಬೇಕು. ನೀವು ಯಾರೊಂದಿಗೆ ನಿಜವಾಗಿ ಇರಬೇಕೋ ಅವರಲ್ಲಿ ಒಬ್ಬರಾಗಬೇಕು" ಎಂದು ಅವರಿಗೆ ತೀವ್ರವಾಗಿ ಅನ್ನಿಸಿತ್ತು. ಹಾಗಾಗಿಯೇ ಅವರ ಸಂಗೀತಕ್ಕೆ ಕೇಳುಗರನ್ನು ಮಂತ್ರಮುಗ್ಧಗೊಳಿಸುವ, ಆಳವಾದ ಧ್ಯಾನಸ್ಥ ಗುಣ ಸಾಧ್ಯವಾಗಿರುವುದು. ಅದು ನಮ್ಮನ್ನು ಪರಿವರ್ತಿಸಿಬಿಡುತ್ತದೆ.

ಸಂಗೀತಗಾರ, ಚಿಂತಕ ಟಿ.ಎಂ. ಕೃಷ್ಣ ಹೇಳುವಂತೆ, "ಕಿಶೋರಿಯವರನ್ನು ಆಲಿಸುವುದೆಂದರೆ, ಅದು ಕೇವಲ ಸಂಗೀತದ ಸೌಂದರ್ಯವನ್ನಷ್ಟೇ ಆಸ್ವಾದಿಸುವುದಲ್ಲ, ಅದನ್ನೂ ಮೀರಿದ್ದು. ಅವರು ಹಾಡುವಾಗ ರಾಗದಾಚೆಗಿನ ಯಾತ್ರೆಯಲ್ಲಿದ್ದಾರೆ ಎನಿಸುತ್ತದೆ. ಅವರು ಸಂಪೂರ್ಣವಾಗಿ ಬೇರೆಯೇ ಮಟ್ಟಕ್ಕೆ ಹೋಗಿಬಿಟ್ಟಿರುತ್ತಾರೆ. ರಾಗ ಬದುಕಿನೊಂದಿಗೆ ಬೆರೆತು, ಕಿಶೋರಿ ಅಮೋಣಕರ್ ಆ ಅನುಭವದ ವಾಹಕಿಯಾಗಿಬಿಡುತ್ತಾರೆ." ಒಮ್ಮೆ ಕಿಶೋರಿಯವರೇ ಅಂದಂತೆ, "ಹಾಡುವಾಗ ನಾನು ಸುಂದರವಾಗಿ ಕಾಣುತ್ತೇನೆಂದು ಜನ ಹೇಳುತ್ತಾರೆ. ಅದಕ್ಕುತ್ತರ ಇಂದು ದೊರಕಿದೆ ಎನಿಸುತ್ತದೆ. ಹಾಡುವಾಗ ನನ್ನ ಸ್ವರಗಳು, ಲಯ ಮತ್ತು ಸ್ವತಃ ನನ್ನನ್ನೂ ಸೇರಿದಂತೆ ಎಲ್ಲವೂ ಸುಂದರವಾಗಿರಬೇಕು. ಈ ನನ್ನ ಹಂಬಲ ಅದೆಷ್ಟು ತೀವ್ರವಾದುದೆಂದರೆ ವೇದಿಕೆಯ ಮೇಲೆ ಸುಂದರವಾಗಿ ಕಾಣುವುದು ಕಿಶೋರಿಯಲ್ಲ, ಅಲ್ಲಿ ಸೌಂದರ್ಯವೇ ಮೈತಳೆದಿರುತ್ತದೆ." ನಿಜ, ಅಷ್ಟೆ ಅಲ್ಲ, ಅವರು ಬಳಸುವ ಹೊಸ ಸಂಚಾರಗಳು ಆಯಾ ರಾಗದ ಭಾವ, ಕಲಾತ್ಮಕತೆ ಹಾಗೂ ಸೌಂದರ್ಯಕ್ಕೆ ಧಕ್ಕೆಯುಂಟುಮಾಡುವುದಿಲ್ಲ. ಅದರಿಂದಾಗಿಯೇ ಆ ಬಗ್ಗೆ ಎಷ್ಟೇ ಟೀಕೆ ಬಂದರೂ ಅವರು ಅವುಗಳನ್ನು ಬದಲಿಸಿಕೊಂಡಿಲ್ಲ.

ಸಂಗೀತಗಾರ ಜಕೀರ್ ಹುಸೇನ್ ಹೇಳುವಂತೆ ಪ್ರತಿ ಬಾರಿ ಹಾಡುವಾಗಲೂ ಒಬ್ಬ ಕಲಾವಿದನಿಗೆ ನಿರ್ವಾಣ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಿಮವಾಗಿ ನಿಮಗೆ